ದಿನಾಂಕ: 03-10-2023 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರಿದ ಪಾಟೀ ಸವಾಲು ಃ ಶ್ರೀ ಎ ಯು ಎಸ್ ವಕೀಲರಿಂ ದಃ

ನನ್ನ ವಿವಾಹದ ನಂತರ ನಾನು ಮತ್ತು ಎದುರುದಾರರು ನಮ್ಮ ಮನೆಯಲ್ಲಿ ಅಂದರೆ ಬಿ ಬಾಡಗ ಗ್ರಾಮದಲ್ಲಿ ವಾಸವಾಗಿದ್ದೆವು . ನಮ್ಮ ಮನೆ ಎಂದರೆ ನನಗೆ ಭಾಗ ಬಂದ ಮನೆಯಾಗಿದ್ದು ಅದು ಪ್ರತ್ಯೇಕವಾಗಿತ್ತು . ನಮ್ಮದೇ ಮನೆಯಲ್ಲಿ ನನಗೆ ಭಾಗವಾಗಿ ಪ್ರತ್ಯೇಕವಾದ ಕೊಠಡಿ ಇತ್ತು . ಸದರಿ ಪಾಲುವಿಭಾಗಕ್ಕೆ ಯಾವುದೇ ದಾಖಲೆ ಇಲ್ಲ, ಅದು ಬಾಯಿಮಾತಿನ ಮೇಲೆ ಆಗಿತ್ತು , ನಮ್ಮ ಮನೆಯ ಬೇರೆ ಬಾಗದಲ್ಲಿ ನಮ್ಮ ತಂದೆ ತಾಯಿ, ಮತ್ತು ನನ್ನ ಅಣ್ಣನ ಕುಟುಂಬದವರು ವಾಸವಿದ್ದರು. ನಾವು ಅಡಿಗೆ ಪ್ರತ್ಯೇಕವಾಗಿ ಮಾಡಿಕೊಳ್ಳುತ್ತಿದ್ದೆವು . ನಮ್ಮದು ಕೂಡುಕುಟುಂಬವಾಗಿದ್ದು ಎಲ್ಲರೂ ಒಟ್ಟಿಗೆ ವಾಸವಿದ್ದೆವು ಎಂದರೆ ಸರಿಯಲ್ಲ. ಎದುರುದಾರರು ಅರೆಬಾಷೆ ಮಾತನಾಡುವ ಗೌಡರ ಕುಟುಂಬದವರಾಗಿದ್ದು ನಮ್ಮ ಕುಟುಂಬದವರು ಇದರಿಂದಾಗಿ ಎದುರುದಾರರರನ್ನು ಹೀಯಾಳಿಸುತ್ತಿದ್ದರು ಎಂದರೆ ಸರಿಯಲ್ಲ. ಈ ಕಾರಣದಿಂದಾಗಿ ನಮ್ಮ ಕುಟುಂಬದವರು ಎದುರುದಾರರನ್ನು ಬೈಯುತ್ತಿದ್ದು ಆಗ ನಾನೂ ಸಹ ಅವರೊಡನೆ ಸೇರಿಕೊಂಡು ಎದುರುದಾರರನ್ನು ಬೈಯುತ್ತಿದ್ದೆ ಎಂದರೆ ಸರಿಯಲ್ಲ. ಎದುರುದಾರರು ಗರ್ಬಿಣಿಯಾದದ್ದು ಯಾವಾಗ ಎಂದು ನನಗೆ ನೆನಪಿಲ್ಲ. ಆದರೆ ಅವರು ಜುಲೈ 2013 ರಲ್ಲಿ ಹೆರಿಗೆಗೆಂದು ಸುಳ್ಯದ ತಮ್ಮ ಮನೆಗೆ ಹೋಗಿದ್ದರು . ಆನಂತರ ಅವರು ಆಸ್ಪತ್ರೆಯಲ್ಲಿ ಹೆರಿಗೆಯಾಗಿರುವ ಬಗ್ಗೆ ಫೋನ್ ಮುಖಾಂತರ ತಿಳಿಸಿದ್ದರು. ಆಗ ನಾನು ನನ್ನ ತಂದೆ ತಾಯಿ ಎಲ್ಲರೂ ನೋಡಲು ಹೋಗಿದ್ದೆವು . ನಾನು ಹೆರಿಗೆ ಖರ್ಚಿಗೆಂದು ರೂ. 30 ಸಾವಿರ ಕೊಟ್ಟಿದ್ದೆ ಎಂದು ನನ್ನ ಅರ್ಜಿಯಲ್ಲಿ ಹೇಳಿದ್ದು ಅದರ ಬಗ್ಗೆ ಯಾವುದೇ ದಾಖಲೆಗಳು ಇಲ್ಲ , ಎದುರುದಾರರ ಹೆರಿಗೆ ಖರ್ಚನ್ನು ಆಕೆಯ ಮನೆಯವರೇ ನೋಡಿಕೊಂಡಿದ್ದು ನಾನು ಇದರ ಬಗ್ಗೆ ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ.

ಎದುರುದಾರರಿಗೆ ಹೆರಿಗೆಯಾದ ನಂತರ ಅವರು ಪುತ್ತೂರಿನ ಪೆರ್ಲಂಪಾಡಿಯ ತವರು ಮನೆಯಲ್ಲಿ ವಾಸವಾಗಿದ್ದರು. ಎದುರುದಾರರಿಗೆ ಹೆರಿಗೆಯಾದ ನಂತರ ನಾನು ಅವರನ್ನು ನೋಡಲು ಒಂದು ಬಾರಿ ಮಾತ್ರ ಹೋಗಿದ್ದೆ ಅದುಎ ಮಗಹುವಿನ ನಾಮಕರಣದ ಸಮಯದಲ್ಲಿ. ಎದುರುದಾರರು ಹೆರಿಗೆಯಾದ ನಂತರ ನಾನು ನೋಡಲು ಹೋದಾಗ ನನ್ನ ಕೈಯಲ್ಲಿಽದ್ದ ಅವರು ಕೊಟ್ಟಿದ್ದ ಒಂದು ಉಂಗುರದ ಬಗ್ಗೆ ಅವರು ಕೇಳಿದಾಗ ನಾನು ಅದನ್ನು ಮಾರಾಟ ಮಾಡಿದ್ದೇನೆಂದು

ಹೇಳಿದ್ದೆ ಎಂದರೆ ಸರಿಯಲ್ಲ. ಅದರ ಬಗ್ಗೆ ಎದುರುದಾರರು ಕೇಳಿದಾಗ ನಾನು ಸಿಟ್ಟು ಮಾಡಿಕೊಂಡು ಎದುರುದಾರರ ಜೊತೆ ಜಗಳವಾಡಿದ್ದು ಆನಂತರ ನಾನು ಅಲ್ಲಿಃಗೆ ಹೋಗಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿದಾರರು ಮುಂದಡಿರಿದು ತಮಗೆ ಎದುರುದಾರರ ಮನೆಯವರು ತಮ್ಮ ಒಡನೆ ಜಗಳ ಮಾಡಿ ನಮ್ಮ ಮನೆಯ ಆಸ್ತಿಯ ಆರ್ ಟಿ ಸಿ ತೆಗೆದುಕೊಂಡು ಬಾ , ಪಾಲು ಮಾಡಿಸಬೇಕು ಎಂದು ಕೇಳಿದ್ದರು ಎಂದು ನುಡಿಯುತ್ತಾರೆ. ಆ ರೀತಿ ಎದುರುದಾರರ ಮನೆಯವಾರು ಪಾಲು ಮಾಡಬೇಕೆಂದು ಕೇಳಿಲ್ಲ ಎಂದರೆ ಸರಿಯಲ್ಲ. ನಾನೇ ಎದುರುದಾರರ ಜೊತೇ ಜಗಳ ಮಾಡಿಕೊಂಡು ಆಕೇಯನ್ನು ಮತ್ತು ಮಗುವನ್ನು ನೋಡಲು ಹೋಗಲೇ ಇಲ್ಲ ಎಂದರೆ ಸರಿಯಲ್ಲ. ನಾವೆಲ್ಲರೂ ಸೇರಿಕೊಂಡು ಎದರುದಾರರಿಗೆ ಉಪದ್ರವ ಕೊಡುತ್ತಿದ್ದ ಕಾರಣ ಆಕೇಗೇ ನಮ್ಮ ಮನೆಗೆ ಬರುವ ಇಚ್ಚೆ ಇರಲಿಲ್ಲ ಎಂದರೆ ಸರಿಯಲ್ಲ . ನಾವು ಎದುರುದಾರರಿಗೆ ಜೀವ ಬೆದರಿಕೆ ಹಾಕಿದ್ದೇವೆಂದು ಆಪಾದಿಸಿ ಆಕೆಯ ಮನೆಯವರು ನಮ್ಮ ವಿರುದ್ಧ ಒಂದು ದೂರನ್ನು ಭಾಗಮಂಡಲ ಪೋಲೀಸ್ ಠಾಣೆಗೆ ದಾಖಲಿಸಿದ್ದರು ಎಂದರೆಸ ರಿ . ಸಾಕ್ಷಿದಾರರು ಮುಂದುವರಿದು ಅದು ಸುಳ್ಳ ದೂರು ಎಂದು ನುಡಿಯುತ್ತಾರೆ, ಸಾಕ್ಷಿದಾರರಿಗೆ ಒಂದು ದೂರಿನ ನಕಲನ್ನು ತೋರಿಸಿದಾಗ ಸಾಕ್ಷಿದಾರರು ಒಪ್ಪಿದ್ದು ಅದನ್ನು ನಿಆರ್-1 ಎಂದು ಗುರುತಿಸಲಾಯಿತುಎ. ಸಾಕ್ಷಿದಾರರು ನಿಆರ್-1 ರಲ್ಲಿ ಇರುವ ಅಂಶಗಳು ಸುಳ್ಳು ಎಂದು ನುಡಿಯುತ್ತಾರೆ. ಎದುರುದಾರರು ನನ್ನ ವಿರುದ್ಧ ಸಾಂತ್ವನ ಕೇಂದ್ರ್ರದಲ್ಲಿ ಒಂದು ದೂರನ್ನು ದಾಖಲಿಸಿದ್ದರು ಎಂದರೆ ಸರಿ , ಸಾಕ್ಷಿದಾರರು ಒಂದು ದೂರಿನ ನಕಲನ್ನು ನೋಡಿ ಒಪ್ಪಿದ್ದು ಅದನ್ನು ನಿಆರ್-2 ಎಂದು ಮತ್ತು ಅದರ ಜೊತೆಯಿರುವ ಒಂದು ಹಿಂಬರಹವನ್ನು ನಿಆರ್-3 ಎಂದು ಗುರುತಿಸಲಾಯಿತು . ಸಾಂತ್ತನ ಕೇಂದ್ರ್ರದವರು ನನಗೆ ನೋಟೀಸ್ ಜಾರಿಗೊಳಿಸಿದ್ದರು ಎಂದರೆ ಸರಿ .

ನಮ್ಮ ತಂದೆ ತಾಯಿಗೆ ಒಟ್ಟು ಇಬ್ಬರು ಗಂಡುಮಕ್ಕಳು ವತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತೇವೆ. ನನ್ನ ಪಾಲಿಗೆ ಒಟ್ಟು 94 ಸೆಂಟ್ಸ್ ಜಮೀನು ಬಂದಿರುತ್ತದೆ. ನನ್ನ ಅಣ್ಣ ನಮ್ಮ ತಂದೆಯ ವಿರುದ್ಧ ಪಾಲುವಿಬಾಗ ಕೋರಿ ದಾವೆಯನ್ನು ಸಲ್ಲಿಸಿದ್ದ ವಿಚಾರ ನನಗೆ ಗೊತ್ತು . ನನಗೆ ಬಂದ ಪಾಲು ಬಾಯಿಮಾತಿನ ಪಾಲಿನಲ್ಲಿ ಬಂದಿರುತ್ತದೆ. ಸದರಿ 94 ಸೆಂಟ್ಸ್ ಜಮೀನು ನಮ್ಮ ತಂದೆಯ ಹೆಸರಿನಲ್ಲಿಯೇ ಮುಂದುವರಿದಿರುತ್ತದೆ, ನನ್ನ ಹೆಸರಿಗೆ ವರ್ಗಾವಣೆ ಆಗಿಲ್ಲ. ನನಗೆ ಸರ್ವೆ ನಂ. 89/2012 ರಲ್ಲಿ 1/3 ರಷ್ಟು ಭಾಗಾಂಶ ಮಾತ್ರ ಇದೆ ಎಂದು ಅರ್ಜಿಯಲ್ಲಿ ತಿಳಿಸಿದ್ದೇನೆಂದರೆ ಸರಿ . ನಮ್ಮ ಕುಟುಂಬಕ್ಕೆ ಒಟ್ಟು 10 ಎಕರೆಗಿಂತ ಹೆಚ್ಚು ಜಮೀನು ಇದೆ ಎಂದರೆ ಸರಿಯಲ್ಲ. ನನ್ನ ಅಣ ನಮ್ಜ ತಂದೆಯ ವಿರುದ್ಧ ದಾಖಲಿಸಿದ್ದ ದಾವೆಯಲ್ಲಿ ತಮಗೆ ಒಟ್ಟು 10 ಎಕರೆ ಜಮೀನು ಇದೆ ಮತ್ತು ಅದರಲ್ಲಿ ತನಗೆ ಭಾಗ ಬೇಕು ಎಂದು ಕೇಳಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನೂ ಸಹ ಪಕ್ಷಗಾರ ಎಂದರೆ ಸರಿಯಲ್ಲ. ನನಗೆ ಆ ದಾವೆಯ ವಿಚಾರವೇ ಗೊತ್ತಿಲ್ಲ, ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ನಮ್ಮ ತಂದೆ-ತಾಯಿಯ ಕಿರುಕುಳ ತಾಳಲಾರದೆ ಪ್ರತ್ಯೇಕವಾದ ಮನೆ ಮಾಡಬೇಕೆಂದು ಬೇಡಿಕೆ ಇಟ್ಟಿದ್ದಳೆಂದರೆ ಅದು ಸುಳ್ಳು .

ನನ್ನ ವಿರುದ್ಧ  ನನ್ನ ಅಣ್ಣ , ನಾನು  ಆತನ ಮೇಲೆ ಹಲ್ಲೆ ಮಾಡಿದ್ದೇನೆಂದು ಆಪಾದಿಸಿ ಒಂದು ಪ್ರಕರಣ ದಾಖಲಿಸಿದ್ದ ಎಂದರೆ ಸರಿ .ಸಾಕ್ಷಿದಾರರು ಅದು ಆಸ್ತಿಯ ವಿಷಯವಾಗಿ ಜಗಳವಾಗಿತ್ತು ಎಂದು ನುಡಿಯುತ್ತಾರೆ.  ಸಾಕ್ಷಿದಾರರಿಗೆ ಒಂದು ಪ್ರ ವ . ವ ಯನ್ನು ತೋರಿಸಿದಾಗ ಅದು ಸದರಿ ಪ್ರಕರಣಕ್ಕೆ ಸಂಬಂಧಿಸಿದ್ದು ಎಂದು ಒಪ್ಪಿದ್ದು ಸದರಿ ವರದಿಯನ್ನು ನಿಆರ್-4 ಎಂದು ಗುರುತಿಸಲಾಯಿತು.

ನಾನು ಈ ಪ್ರಕರಣ ದಾಖಲಿಸುವ ಮೊದಲು ಇದೇ ಎದುರುದಾರರ ವಿರುದ್ಧ ದಾಂಪತ್ಯ ಜೀವನ ಹಕ್ಕುಗಳನ್ನು ಕೋರಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ . ಅದರ ವಿಚಾರವಾಗಿ ಇದೇ ಎದುರುದಾರರು ಆ ಅರ್ಜಿಯನ್ನು ಪುತೂತರಿಗೆ ವರ್ಗಾಯಿಸಬೇಕೆಂದು ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ ವಿಚಾರ ನನಗೆ ಗೊತ್ತು . ಸದರಿ ಅರ್ಜಿ ಪುತ್ತೂರಿಗೆ ವರ್ಗಾವಣೆಯಾದ ವಿಚಾರ ನನಗೆ ವಕೀಲರ ಮೂಲಕ ತಿಳಿದುಬಂದಿರುತ್ತದೆ. ಸದರಿ ಅರ್ಜಿ ನಾನು ನ್ಯಾಯಾಲಯಕ್ಕೆ ಹಾಜರಾಗದೇ ಇದ್ದ ಕಾರಣ ವಜಾಗೊಂಡಿತ್ತು  ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿದಾರರು ತನಗೆ ಹರ್ನಿಯಾ ಶಸ್ತ್ರಚಿಕಿತ್ಸೆ ಆಗಿತ್ತು ಎಂದು ನುಡಿಯುತ್ತಾರೆ. ನಾನು ಹಾಜರಾಗದ ಕಾರಣ ಸದರಿ ಅರ್ಜಿ ವಜಾಗೊಂಡಿತ್ತು ಎಂದರೆ ಸಾಕ್ಷಿದಾರರು ಆಗಿರಬಹುದೇಂದು ನುಡಿಯುತ್ತಾರೆ.

ಮುಂದುವರಿದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು